**ದಿನಾಂಕಃ 14.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಫಿರ್ಯಾಧಿ ಪರ ಶ್ರೀ ಟಿ.ಎಂ.ಎಸ್ ವಕೀಲರಿಂದಃ**

ನಾನು ದ್ವಿತೀಯು ಪಿಯುಸಿವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ಫಿರ್ಯಾಧಿಯವರಿಂದ ಒಂದು ಬಾರಿ ಮಾತ್ರ ರೂ.10,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೇನೆ. ನಾನು ಹಲವಾರು ಬಾರಿ ಫಿರ್ಯಾಧಿದಾರರಿಂದ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 02.02.2019 ರಂದು ನಾನು ಫಿರ್ಯಾಧಿದಾರರಿಂದ ರೂ.1,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಸದರಿ ಹಣದ ಮರುಪಾವತಿಗಾಗಿ ನಾನು ನಿಪಿ-1ರ ಚೆಕ್ಕನ್ನು ಫಿರ್ಯಾಧಿದಾರರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ನಾಗೇಂದ್ರ ಮತ್ತು ರುದ್ರಸ್ವಾಮಿ ಎಂಬ ಸಾಕ್ಷಿದಾರರಲ್ಲಿ ರುದ್ರಸ್ವಾಮಿ ಎಂಬುವವರು ಮರಣ ಹೊಂದಿರುತ್ತಾರೆ. ಇನ್ನು ಉಳಿದ ನಾಗೇಂದ್ರರವರನ್ನು ಈ ಪ್ರಕರಣದಲ್ಲಿ ನನ್ನ ಪರವಾಗಿ ಸಾಕ್ಷಿದಾರರನ್ನಾಗಿ ಮಾಡಲು ತೊಂದರೆ ಇರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನನಗೆ ಅಡುಗೆ ಮಾಡಲು ದೊಡ್ಡ ಆರ್ಡರ್ ಬಂದಿದೆ ಎಂದು ನಾನು ಫಿರ್ಯಾಧಿದಾರರಿಂದ ರೂ.90,000/- ಹಣವನ್ನು ಸಾಲವಾಗಿ ಕೇಳಿದ್ದೆನು ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ಸಂದರ್ಭದಲ್ಲಿ ನಾನು ಫಿರ್ಯಾಧಿದಾರರಿಂದ ರೂ.1,00,000/- ಹಣವನ್ನು ಸಾಲವಾಗಿ ಪಡೆದುಕೊಂಡು ಸದರಿ ಸಾಲದ ಹಣದ ಮರುಪಾವತಿಗಾಗಿ ನಿಪಿ-1ರ ಚೆಕ್ಕನ್ನು ಫಿರ್ಯಾಧಿದಾರರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಲವಾರು ಬಾರಿ ಫಿರ್ಯಾಧಿದಾರರನ್ನು ಭೇಟಿ ಮಾಡಿ ನಾನು ನೀಡಿದ್ದ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿಕೊಂಡಿದ್ದೇನು.

ನಿಪಿ-1ರ ಚೆಕ್ ನನ್ನ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ. ನಿಪಿ-1ರ ಚೆಕ್ ನಲ್ಲಿರುವ ಸಹಿಯು ನನ್ನದಾಗಿರುತ್ತದೆ. ನಿಪಿ-1ರ ಚೆಕ್ಕನ್ನು ನಾನೇ ಭರ್ತಿ ಮಾಡಿ ಫಿರ್ಯಾಧಿದಾರರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾಧಿದಾರರು ನನಗೆ ತಮ್ಮ ವಕೀಲರ ಮೂಲಕ ನೋಟಿಸ್ ನೀಡಿದ್ದರು ಎಂದರೆ ಸರಿ. ಸದರಿ ನೋಟಿಸ್ ನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಸದರಿ ನೋಟಿಸ್ ಗೆ ನಾನು ಪ್ರತ್ಯುತ್ತರ ತಿಳುವಳಿಕೆ ಪತ್ರವನ್ನು ನೀಡಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಫಿರ್ಯಾಧಿದಾರರು ನನ್ನ ಸ್ನೇಹಿತರಾಗಿದ್ದರಿಂದ ನಂಬಿಕೆಯಿಂದ ಪ್ರತ್ಯುತ್ತರ ನೀಡಿಲ್ಲ ಎಂದು ನುಡಿಯುತ್ತಾರೆ. ನಮ್ಮ ಗ್ರಾಮದ ನಾಗೇಶ್ ಬಿನ್ ಲೇಟ್ ನಂಜುಂಡಪ್ಪರವರು ನನಗೆ ಗೊತ್ತಿರುತ್ತಾರೆ. ಸದರಿ ನಾಗೇಶ್ ರವರು ಈಗ ನರಸೀಪುರದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಸದರಿ ನಾಗೇಶ್ ರವರು ಸಹ ಅಡುಗೆ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಸದರಿ ನಾಗೇಶ್ ರವರಿಂದ ರೂ.2,50,000/- ಹಣವನ್ನು ಪಡೆದುಕೊಂಡು ಒಂದು ಸಹಿ ಮಾಡಿದ ಚೆಕ್ಕನ್ನು ನೀಡಿದ್ದೆನು ಎಂದರೆ ಸಾಕ್ಷಿದಾರರು ನಾನು ನಾಗೇಶ್ ರವರಿಂದ ರೂ.12,000/- ಹಣವನ್ನು ಮಾತ್ರ ಪಡೆದುಕೊಂಡು ಚೆಕ್ಕನ್ನು ನೀಡಿದ್ದೆನು ಎಂದು ನುಡಿಯುತ್ತಾರೆ. ಸದರಿ ನಾಗೇಶ್ ರವರು ನನ್ನ ವಿರುದ್ಧ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣವನ್ನು ನಾವು ರಾಜಿ ಮಾಡಿಕೊಂಡೆವು ಎಂದರೆ ಸಾಕ್ಷಿದಾರರು ರೂ.12,000/- ಹಣಕ್ಕೆ ರಾಜಿ ಮಾಡಿಕೊಂಡೆವು ಎಂದು ನುಡಿಯುತ್ತಾರೆ. ಸದರಿ ರಾಜಿ ಹಣವನ್ನು ನಾನು ನಾಗೇಶ್ ರವರಿಗೆ ಮರುಪಾವತಿಸಿಲ್ಲ ಎಂದರೆ ಸರಿಯಲ್ಲ.

ನಮ್ಮ ಗ್ರಾಮದವರಾದ ಬಿ.ಮಲ್ಲಿಕಾರ್ಜುನಸ್ವಾಮಿ ಬಿನ್ ಲೇಟ್ ಬಸವಣ್ಣರವರು ನನಗೆ ಗೊತ್ತಿರುತ್ತಾರೆ. ನಾನು ಸದರಿ ಮಲ್ಲಿಕಾರ್ಜುನಸ್ವಾಮಿರವರಿಂದ ರೂ.50,000/- ಹಣವನ್ನು ಸಾಲ ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ನಾನು ನಮ್ಮ ಗ್ರಾಮದಲ್ಲಿ ಹಲವಾರು ಜನರಿಂದ ಹಣವನ್ನು

ಸಾಲವಾಗಿ ಪಡೆದುಕೊಂಡು ಸದರಿ ಸಾಲದ ಹಣದ ಮರುಪಾವತಿಗಾಗಿ ಚೆಕ್ಕುಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾಧಿದಾರರು ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲಿಸಿದ ನಂತರ ನಾನು ಫಿರ್ಯಾಧಿದಾರರ ವಿರುದ್ಧ ಜಿಲ್ಲಾ ಉಪನೋಂದಣಾಧಿಕಾರಿಗಳಿಗೆ ಫಿರ್ಯಾಧಿದಾರರ ಪತ್ರ ಬರಹಗಾರರ ಪರವಾನಿಗೆಗೆ ತಕರಾರು ಸಲ್ಲಿಸಿದ್ದೇನು ಎಂದರೆ ಸಾಕ್ಷಿದಾರರು ನಾನು ತಕರಾರು ನೀಡಿದ್ದೇನೆ ಆದರೆ ಈ ಪ್ರಕರಣದ ವಿಚಾರವಾಗಿ ನೀಡಿಲ್ಲ ಎಂದು ನುಡಿಯುತ್ತಾರೆ. ನಾನು ಫಿರ್ಯಾಧಿದಾರರಿಂದ ರೂ.1,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದರೂ ಸಹ ಸದರಿ ಸಾಲದ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು, ತಿ.ನರಸಿಪುರ.**